ಅಲ್ಲದೇ ಕೇಂದ್ರೀಯ ಉಣ್ಣೆ ಅಭಿವೃದ್ಧಿ ಮಂಡಳಿ, ಜೋಧ್‌ಪುರ ವತಿಯಿಂದ ಹಮ್ಮಿಕೊಳ್ಳಲಿರುವ ಸಮಗ್ರ ಉಣ್ಣೆ ಅಭಿವೃದ್ಧಿ ಯೋಜನೆಯಡಿ ಕುರಿಗಾರರಿಗೆ ವಿದೇಶಿ ರ್‍ಯಾಂಬುಲೆ ಮಿಶ್ರತಳಿ ಟಗರುಗಳನ್ನು ತಳಿ ಅಭಿವೃದ್ಧಿಗಾಗಿ ಉಚಿತವಾಗಿ ವಿತರಿಸಲಾಗುತ್ತಿದೆ.

668 (815) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :– ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಹಂದಿ ಸಾಕಾಣಿಕೆಗೆ ಸರ್ಕಾರ ಯಾವುದಾದರೂ ವಿಶೇಷ ಯೋಜನೆಯನ್ನು ಕೈಗೊಂಡಿದೆಯೆ ;

(ಆ) ಉನ್ನತ ಗುಣಮಟ್ಟದ ಹಂದಿ ಮಾಂಸಕ್ಕೆ ವಿದೇಶಗಳಲ್ಲಿ ಭಾರಿ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಇ) ಹಾಗಿದ್ದಲ್ಲಿ, ಇಂತಹ ಅವಕಾಶವನ್ನು ರೈತರ ಕಲ್ಯಾಣಕ್ಕಾಗಿ ಉಪಯೋಗಿಸುವ ಉದ್ದೇಶ ರಾಜ್ಯ ಸರ್ಕಾರದ ಮುಂದೆ ಇದೆಯೆ ?

ಶ್ರೀ ರೇವೂನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು) :–

(ಅ) ರಾಜ್ಯದಲ್ಲಿ ಹಂದಿ ಸಾಕಾಣಿಕೆಗೆ ಯಾವುದೇ ವಿಶೇಷ ಯೋಜನೆಯನ್ನು ಸರ್ಕಾರ ಕೈಗೊಂಡಿರುವುದಿಲ್ಲ.

(ಆ) ಉನ್ನತ ಗುಣಮಟ್ಟದ ಹಂದಿ ಮಾಂಸಕ್ಕೆ ವಿದೇಶಗಳಲ್ಲಿ ಭಾರಿ ಬೇಡಿಕೆ ಇದ್ದರೂ ಸಹ, ಪ್ರಸ್ತುತ ರಾಜ್ಯದಲ್ಲಿರುವ ಹಂದಿ ತಳಿಗಳು ಹೆಚ್ಚಾಗಿ ಸ್ಥಳೀಯ ತಳಿಗಳಾಗಿರುವುದರಿಂದ ರಫ್ತಿಗೆ ಯೋಗ್ಯದಾಯಕ ಆಗಿರುವುದಿಲ್ಲ ಮತ್ತು ವಿದೇಶಗಳಿಂದ ಹಂದಿ ಮಾಂಸದ ರಫ್ತಿಗೆ ಯಾವುದೇ ಬೇಡಿಕೆ ಸಹ ಬಂದಿರುವುದಿಲ್ಲ.

(ಇ) ಈ ಹಂದಿ ಮಾಂಸಕ್ಕೆ ಬೇರೆ ದೇಶಗಳಿಂದ ಬೇಡಿಕೆ ಬಂದಲ್ಲಿ ಉನ್ನತ ಗುಣಮಟ್ಟದ ಹಂದಿ ಮಂಸದ ಉತ್ಪಾದನೆಗಾಗಿ ಕ್ರಮವಹಿಸಲಾಗುವುದು. ಆದರೆ ಈಗಾಗಲೇ ರೈತರ ಉಪಯೋಗಕ್ಕಾಗಿ ರಾಜ್ಯದಲ್ಲಿ ಉನ್ನತ ಗುಣಮಟ್ಟದ ಹಂದಿ ಸಂವರ್ಧನೆಗಾಗಿ, ಇಲಾಖೆಯ 3 ಹಂದಿ ತಳಿ ಸಂವರ್ಧನಾ ಕೇಂದ್ರಗಳಿಂದ ಗುಣಮಟ್ಟದ ಹಂದಿ ಮರಿಗಳನ್ನು ಉತ್ಪಾದಿಸಿ ಆಸಕ್ತ ರೈತರಿಗೆ ಈ ಕೆಳಕಂಡ ಯೋಜನೆಗಳಲ್ಲಿ ವಿತರಿಸಲಾಗುತ್ತಿದೆ.

1. ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ
2. ಟಗರು ಮತ್ತು ಹಂದಿ ವಿತರಣೆ ಯೋಜನೆ
3. ಸ್ವರ್ಣ ಜಯಂತಿ ಗ್ರಾಮ ಸ್ವರಾಜ್ ರೋಜಗಾರ್ ಯೋಜನೆ.
4. ,ಸ್ತ್ರೀ ಶಕ್ತಿ ಗುಂಪುಗಳಿಗೆ,

ಇತರೆ ಆಸಕ್ತ ರೈತರಿಗೂ ಸಹ ಸರ್ಕಾರ ನಿಗಧಿಪಡಿಸಿದ ಬೆಲೆಯಲ್ಲಿ ಹಂದಿ ಮರಿಗಳನ್ನು ನೀಡಲಾಗುತ್ತಿದೆ.

669 (816) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :- ಮಾನ್ಯ ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆ ವತಿಯಿಂದ ನಡೆಸಲಾಗುತ್ತಿರುವ ಪಶುಚಿಕಿತ್ಸಾಲಯ/ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು ;

(ಆ) ಇಂದಿನ ಪಶುಸಂಪತ್ತಿನ ಯಶಸ್ವಿ ನಿರ್ವಹಣೆಗಾಗಿ ಇನ್ನೂ ಸ್ಥಾಪಿಸಬೇಕಾದ ಪಶುಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು ;

(ಇ) ಇದನ್ನು ಪೂರೈಸಲು ಸರ್ಕಾರಕ್ಕೆ ಬೇಕಾಗುವ ಕಾಲಾವಕಾಶವೆಷ್ಟು ?

ಶ್ರೀ ರೇವೂನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು) :-

(ಅ) ರಾಜ್ಯದಲ್ಲಿ ಒಟ್ಟಾರೆ 3947 ಪಶುಚಿಕಿತ್ಸಾ ಕೇಂದ್ರಗಳಿವೆ. ಅವುಗಳ ವಿವರ ಈ ಕೆಳಗಿನಂತಿದೆ :-

(1)	ಪಶು ಆಸ್ಪತ್ರೆ	345
(2)	ಪಶುಚಿಕಿತ್ಸಾಲಯಗಳು	1762
(3)	ಸಂಚಾರಿ ಪಶುಚಿಕಿತ್ಸಾಲಯಗಳು	174
(4)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	1198
(5)	ಕೃತಕ ಗರ್ಭಧಾರಣಾ ಕೇಂದ್ರ	400
(6)	ಪ್ರಧಾನ ಗ್ರಾಮೀಣಾಭಿವೃದ್ಧಿ ಯೋಜನೆ	06
(7)	ಪ್ರಾದೇಶಿಕ ಪ್ರಯೋಗ ಶಾಲೆ	03
(8)	ಇತರೆ	59
	ಒಟ್ಟು	3947

(ಆ) 1976ರ ರಾಷ್ಟ್ರೀಯ ಕೃಷಿ ಆಯೋಗದ ನೀತಿಯನುಸಾರ ಪ್ರತಿ 5000 ಜಾನುವಾರು ಘಟಕಗಳಿಗೆ ಪಶುವೈದ್ಯರಿರುವ ಒಂದು ಸಂಸ್ಥೆಯು ಇರಬೇಕಾಗುತ್ತದೆ. ರಾಜ್ಯದಲ್ಲಿ ಒಟ್ಟು 1,50,63,925 ಜಾನುವಾರು ಘಟಕಗಳಿದ್ದು, 3012 ಪಶುವೈದ್ಯ ಸಂಸ್ಥೆಗಳು ಇರಬೇಕಾಗಿತ್ತು. ಆದರೆ ಪ್ರಸ್ತುತ 3947 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಡಾ: ಡಿ.ಎಂ. ನಂಜುಂಡಪ್ಪರವರ ಪ್ರಾದೇಶಿಕ ಅಸಮತೋಲನಾ ವರದಿಯ ಪ್ರಕಾರ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ, ಯಾವ ತಾಲ್ಲೂಕುಗಳಲ್ಲಿ ಪಶುವೈದ್ಯ ಸಂಸ್ಥೆಗಳು ಕೊರತೆ ಇವೆಯೋ, ಆ ತಾಲ್ಲೂಕುಗಳಲ್ಲಿ ಮಾತ್ರ ಇನ್ನೂ 249 ಪಶುಚಿಕಿತ್ಸಾಲಯಗಳನ್ನು ಸ್ಥಾಪಿಸಬೇಕಾಗಿರುತ್ತದೆ. ಆದರೆ ಪಶುವೈದ್ಯ ಸಂಸ್ಥೆಗಳು ಕೊರತೆ ಇರದ